ಕರ್ನಾಟಕ Government ಸರ್ಕಾರ of karnataka

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
DEPARTMENT OF STATE EDUCATIONAL RESEARCH AND TRAINING
No 4, 100 FT RING ROAD, BANASHANKARI 3 RD STAGE BENGALURU - 560 085
Email: dpi.dsert-ka@nic.in Website: http://dsert.kar.nic.in

DSERT

Phone - 080 26980100
Fax - 080 26422377

DSERT:ETC-6/ ದೂರದರ್ಶನ ಪಾಠಪ್ರಸಾರ. ಹಿಮ್ಮಾಹಿತಿ/39/20-21 ದಿ:15.03.2021

**ಪರಿಷ್ಕೃತ ಸುತ್ತೋಲೆ**

ವಿಷಯ: ದೂರದರ್ಶನ ಚಂದನವಾಹಿನಿಯಲ್ಲಿ ಪ್ರಸಾರವಾದ ವೀಡಿಯೋ ಪಾಠಗಳು ಹಾಗೂ ಆಕಾಶವಾಣಿ ಮೂಲಕ ಪ್ರಸಾರ ಮಾಡಲಾದ ರೇಡಿಯೋ ಪಾಠಗಳ ಹಿಮ್ಮಾಹಿತಿ ಸಲ್ಲಿಸುವ ಬಗ್ಗೆ.

ಉಲ್ಲೇಖ:
1. DSERT:ETC-6/ ದೂರದರ್ಶನ ಪಾಠಪ್ರಸಾರ. ಹಿಮ್ಮಾಹಿತಿ/39/20-21 ದಿ:03.03.2021
2. DSERT:ETC-6/ ರೇಡಿಯೋ ಪಾಠಪ್ರಸಾರ. ಹಿಮ್ಮಾಹಿತಿ/38/20-21 ದಿ:03.03.2021

*****

ಮೇಲ್ಕಂಡ ಉಲ್ಲೇಖಿತ ಪತ್ರಗಳಲ್ಲಿ ಡಿ.ಎಸ್.ಇ.ಅರ್.ಟಿ ಯಿಂದ 8, 9 ಮತ್ತು 10ನೇ ತರಗತಿಯ ವಿದ್ಯಾರ್ಥಿಗಳಿಗೆ ಸಿದ್ಧಪಡಿಸಿ ಪ್ರಸಾರ ಮಾಡಲಾದ ವೀಡಿಯೋ ಪಾಠಗಳ ಹಾಗೂ ಆಕಾಶವಾಣಿ ಮೂಲಕ ಪ್ರಸಾರ ಮಾಡಲಾದ 1 ರಿಂದ 4ನೇ ತರಗತಿ ರೇಡಿಯೋ ಪಾಠಗಳ ಬಗ್ಗೆ ಹಿಮ್ಮಾಹಿತಿಯನ್ನು ಪಡೆಯಲು ನಮೂನೆಗಳನ್ನು ನೀಡಲಾಗಿದ್ದು, ಹಲವು ಜಿಲ್ಲೆಗಳಿಂದ ಮಾಹಿತಿ ಸಂಗ್ರಹಣೆ ಬಗ್ಗೆ ಸ್ಪಷ್ಟೀಕರಣ ಕೋರಿರುತ್ತಾರೆ. ಈ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ಪರಿಷ್ಕರಿಸಿದ ಮಾಹಿತಿ ಮತ್ತು ನಮೂನೆ ನೀಡುತ್ತಿದ್ದು ಅದರಂತೆ ಕ್ರಮವಹಿಸಲು ಸೂಚಿಸಿದೆ.

**ವೀಡಿಯೋ ಪಾಠ ಕುರಿತು:**

1. ಪ್ರತಿ ಪ್ರೌಢಶಾಲೆಯಿಂದ ತರಗತಿವಾರು ನಾಲ್ಕು ವಿದ್ಯಾರ್ಥಿಗಳಿಂದ (ಇಬ್ಬರು ಹೆಣ್ಣು ಮಕ್ಕಳು ಹಾಗೂ ಇಬ್ಬರು ಗಂಡು ಮಕ್ಕಳಿಂದ) ನಿಗದಿತ ನಮೂನೆಯಲ್ಲಿ ಮಾಹಿತಿ ಸಂಗ್ರಹಿಸುವುದು.
2. ಪ್ರತಿ ಶಿಕ್ಷಕರಿಂದ ನಿಗದಿತ ನಮೂನೆಯಲ್ಲಿ ಮಾಹಿತಿ ಸಂಗ್ರಹಿಸುವುದು.
3. ಒಬ್ಬರು ಪೋಷಕರು ಹಾಗೂ ಒಬ್ಬರು ಎಸ್.ಡಿ.ಎಂ.ಸಿ ಸದಸ್ಯರಿಂದ ನಿಗದಿತ ನಮೂನೆಯಲ್ಲಿ ಮಾಹಿತಿ ಸಂಗ್ರಹಿಸುವುದು.

**ರೇಡಿಯೋ ಪಾಠ ಕುರಿತು:**

1. ಪ್ರತಿ ಶಿಕ್ಷಕರಿಂದ ನಿಗದಿತ ನಮೂನೆಯಲ್ಲಿ ಮಾಹಿತಿ ಸಂಗ್ರಹಿಸುವುದು.

ಮೇಲ್ಕಂಡ ಮಾಹಿತಿಯನ್ನು ಈ ಕಛೇರಿಯಿಂದ ನೀಡಲಾಗುವ ಗೂಗಲ್ ಫಾರ್ಮಾಟ್(Google Form) ನಲ್ಲಿ ತುಂಬಿ ಅಪ್‌ಲೋಡ್ ಮಾಡುವುದು ಹಾಗೂ ಉಳಿದಂತೆ ಉಲ್ಲೇಖಿತ ಸುತ್ತೋಲೆಗಳಲ್ಲಿ ತಿಳಿಸಿರುವಂತೆ ಕ್ರಮ ಕೈಗೊಳ್ಳುವುದು ಹಾಗೂ ಕ್ರೋಢಿಕೃತ ವರದಿಯನ್ನು 31.03.2021 ರೊಳಗೆ ಕಳುಹಿಸಲು ಸೂಚಿಸಿದೆ.

15/3/21

ನಿರ್ದೇಶಕರು
ಡಿ.ಎಸ್.ಇ.ಆರ್.ಟಿ.
ಬೆಂಗಳೂರು

ಗೆ,

- ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ) ಹಾಗು ಉಪನಿರ್ದೇಶಕರು(ಅಭಿವೃದ್ಧಿ) ರವರಿಗೆ ಅಗತ್ಯ ಕ್ರಮಕ್ಕಾಗಿ.
- ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗು ಎಲ್ಲಾ ಕ್ಷೇತ್ರ ಸಮನ್ವಯಾಧಿಕಾರಿಗಳು, ಬಿ.ಆರ್.ಪಿ. ಮತ್ತು ಸಿ.ಆರ್.ಪಿ. ಗಳಿಗೆ, ಉಪನಿರ್ದೇಶಕರು(ಅಭಿವೃದ್ಧಿ) ರವರ ಮೂಲಕ ಅಗತ್ಯ ಕ್ರಮಕ್ಕಾಗಿ.
- ಕಛೇರಿ ಪ್ರತಿ.